ಕಥೆ



ಜಿ.ಎಸ್. ಸುಶೀಲಾದೇವಿ ಆರ್. ರಾವ್

ಕಲೆ: ಎಸ್.ವಿ. ಹೂಗಾರ್

# ಸಂಸಾರ ಬಂಧ



ಪ್ರಾಜೆಕ್ಟ್ ಮುಗಿದ ನಿರಾಳತೆಯಲ್ಲಿ ಕಂಪನಿಯಿಂದ ಹೊರಬಂದು ಎಲ್ಲರೂ ಮೆಟ್ಟಿಲಿಳಿಯುತ್ತಿದ್ದಾಗ, ಧರಿತ್ರಿ, 'ಸದ್ಯ ಮುಗೀತಪ್ಪ ನಾನ್ ನಿನ್ನೆನೇ ಹೇಳಿದ್ದೆ, ಹೋಟೆಲ್ ಶಿರೀನ್‌ನಲ್ಲಿ ಪಾರ್ಟಿ. ತಲೆಭಾರ ಇಳಿಸ್ಕೋಬೇಕು, ಬನ್ನಿ ಹೋಗೋಣ' ಎಂದಾಗ, ಜ್ಯೋತ್ಸ್ನಾ, ಕ್ಯಾಥರೀನ್, ದಿವ್ಯ ಅವಳೊಡನೆ ಹೆಜ್ಜೆ ಹಾಕಿದರು. 'ಮೇಡಂ, ನಮ್ಮನ್ನ ಕರಿಯಲ್ಲೇನ್ರೀ?' ಅಂತ ಶರತ್ ನಕ್ಕ. 'ಯಾವಾಗ್ಲೂ ನನ್ ಹೆಂಡ್ತಿ ಹಿಂಗೆ, ಮಗ ಹಂಗೆ... ಡ್ರಿಂಕ್ಸ್ ಬೇಡ. ರಮ್ಯಾ ಬೇಜಾರಾಗ್ತಾಳೆ ಅಂತ ಹೊಡ್ಕೋತೀರಿ. ನೀವ್ಯಾಕ್ರೀ ನಮ್ಜೊತೆ ಬರ್ತೀರಿ?' ಧರಿತ್ರಿ ಸಿಡುಕಿದಳು.

'ನಾನ್ ಬರಲ್ಲ ಧರಿತ್ರೀ, ಮಗೂಗೆ ಹುಷಾರಿಲ್ಲ ಅತ್ತೆ ಕೈಲಾಗಲ್ಲ' ಅಂದವಳೇ ಹತ್ತಿರ ಬಂದ ಆಟೋ ಹತ್ತಿದ ಮೀರಾಳತ್ತ ನೋಡಿ, 'ಹೋಗ್ ಹೋಗೇ... ನಿಂಗೊಬ್ಳಿಗೇ ಇರೋದು ಸಂಸಾರ. ಏ ಕಾತೀ, ಆ ಕಡೆ ಏಕೆ ಹೋಗ್ತೀ? ಬಾರೇ ನಮ್ಜೊತೆ' ಅಂತ ಕೂಗಿದಳು ಧರಿತ್ರಿ.

'ಸಾರಿ ಧರಿತ್ರಿ ನಾನ್ ಬರಲ್ಲ'.

'ಯಾಕೇ ನಿನ್ ಪಾರ್ಟ್ನರ್ ಏನಾದರೂ ಅಂದ್ನಾ? ಅದ್ಯಾರೋ ಆಯಿ ಇದಾಳೆ ಮಕ್ಳನ್ನ ನೋಡ್ಕಳಕ್ಕೆ ಅಂದಿದ್ಯಲ್ಲ. ನಡೀ ನೀನಿಲ್ದಿದ್ರೆ ಖುಷೀನೇ ಇರಲ್ಲ.'

'ನಂಗೆ ಮೂಡಿಲ್ಲ ಬರಲ್ಲ. ಯಾರೇನೂ